ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಬೇಕಾದ ವಿಷಯಗಳು

ವಿಷಯ :(ಅ) ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಕಲಿ ಅಂಕ ಪಟ್ಟಿ ಹಗರಣ.

+ಶ್ರೀ ಬಿ.ವಿ.ಶ್ರೀರಾಮರೆಡ್ಡಿ (ಜಾಗೇಪಲ್ಲಿ):- ಮಾನ್ಯ ಅಧ್ಯಕ್ಷರೇ, ನಮ್ಮ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಮಾರ್ಕ್ಸ್ ಕಾರ್ಡ್‌ನ ಹಗರಣಗಳು ದಿನೇ ದಿನೇ ಹೆಚ್ಚಾಗುತ್ತಿವೆ. ಅದು ಯಾವ ಸ್ಥಿತಿಗೆ ಹೋಗಿದೆ ಎಂದರೆ, ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಓದಿ ನಿಜವಾಗಿ ಪಾಸಾದಂತಹ ಯಾವುದೇ ಒಬ್ಬ ವಿದ್ಯಾರ್ಥಿಗೆ, ಅವನಿಗೆ ನಿಜವಾದಂತಹ, ಒರಿಜಿನಲ್ ಮಾರ್ಕ್ ಕಾರ್ಡ್ಸ್ ಸಿಕ್ಕಿತಕ್ಕಂತಹ ಪರಿಸ್ಥಿತಿ ಇವತ್ತು ಈ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಇಲ್ಲ. ಅದಕ್ಕೊಂದು ಉದಾಹರಣೆಯನ್ನು ನಾನು ಹೇಳುತ್ತೇನೆ. ಈ ತಿಂಗಳ 6ನೇ ತಾರೀಖು ಬಿಲಸೂರು ಗೇಟ್ ಪೋಲೀಸ್ ಸ್ಟೇಷನ್‌ನಲ್ಲಿ ಒಂದು ಕೇಸ್ ರಿಜಿಸ್ಟರ್ ಆಗಿದೆ. ಯಾವ ರೀತಿ ಕೇಸ್ ರಿಜಿಸ್ಟರ್ ಆಗಿದೆ ಎಂದು ಹೇಳಿದರೆ, ಒಬ್ಬ ಡೂಪ್ಲಿಕೇಟ್ ಮಾರ್ಕ್ಸ್ ಕಾರ್ಡ್ ತೆಗೆದುಕೊಂಡು ಕಾಲೇಜಿಗೆ ಅಡ್ಮಿಷನ್ ತೆಗೆದುಕೊಂಡಿರತಕ್ಕದ್ದರ ಬಗ್ಗೆ.

"The police have registered a complaint against a B.E. candidate, Register No.89 JB 025, whose marks card as discovered in the answer script is zero while both the ledger and the entry on the marks card shows that he has scored 96% of marks."

(ಉಪಾಧ್ಯಕ್ಷರು (ಶ್ರೀ ಚಂದ್ರೇಗೌಡ ಮಾಮನಿ)ಯವರು ಪೀಠವನ್ನು ಅಲಂಕರಿಸಿದರು)

ಇದೊಂದು ಉದಾಹರಣೆಯನ್ನು ನಾನು ನಿಮಗೆ ಕೊಡುತ್ತಿದ್ದೇನೆ. ಈ ಮಾರ್ಕ್ಸ್‌ಕಾರ್ಡ್ ಹಗರಣಗಳು ಈ ವರ್ಷವೇ ನಡೆದಿರತಕ್ಕವು ಅಲ್ಲ. ಸುಮಾರು ವರ್ಷಗಳಿಂದ ಇವು ನಡೆಯುತ್ತಿವೆ. ಎಂ.ಎಸ್.ರಾಮಯ್ಯ ಇಂಜಿನಿಯರಿಂಗ್ ಕಾಲೇಜಿನಲ್ಲಿ ಗಯಾಸುದ್ದೀನ್ ಎಂಬಂತಹ ಒಬ್ಬ ವಿದ್ಯಾರ್ಥಿ ಬಿ.ಇ. (ಎಲೆಕ್ಟ್ರಿಕಲ್)ಗೆ 1991-92ರಲ್ಲಿ ಅಡ್ಮಿಷನ್ ಆಗಿದ್ದಾನೆ. ಆತ ಈಗ ಅಲ್ಲಿ ಅಭ್ಯಾಸ ಮಾಡುತ್ತಿದ್ದಾನೆ. ಥರ್ಡ್‌ಕ್ಲಾಸ್‌ನಲ್ಲೂ ಕೂಡ ಪಾಸ್ ಆಗಿಲ್ಲದೇ ಇರತಕ್ಕಂತಹ ಒಬ್ಬ ವಿದ್ಯಾರ್ಥಿಗೆ ಎಂ.ಎಸ್.ರಾಮಯ್ಯ ಇಂಜಿನಿಯರಿಂಗ್ ಕಾಲೇಜಿನಲ್ಲಿ ಅಡ್ಮಿಷನ್ ಸಿಕ್ಕಿದೆ, ಅವನು ಅಲ್ಲಿ ಓದುತ್ತಿದ್ದಾನೆ.

ಇದರಲ್ಲಿ ಯಾರ್ಯಾರು ಶಾಮೀಲಾಗಿದ್ದಾರೆ ಏನು ಎನ್ನಶಕ್ಕಂಥದ್ದು ಇದರ ಬಗ್ಗೆ ತನಿಖೆ ಮಾಡಬೇಕೆಂದು ಹೇಳಿ ಹಿಂದಿನ ಆ ವರ್ಷದಲ್ಲಿ ಮಾನ್ಯ ಗೋವಿಂದೇಗೌಡರು ಸಿ.ಐ.ಡಿ. ತನಿಖೆ ಆಗಬೇಕೆಂದು ಒತ್ತಿ ಹೇಳಿದ್ದರು. 11.3.96ರಂದು ಮಾನ್ಯ ಶ್ರೀ